ದಿನಾಂಕಃ 10-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ 1, 4 ರಿಂದ 6 ನೇ ಪ್ರತಿವಾದಿ ಪರ ಶ್ರೀ.ಡಿ.ಟಿ.ಬಿ ವಕೀಲರಿಂದ ಃ**

5. 1962 ರಲ್ಲಿ ನನ್ನ ತಾತ ಪರಪ್ಪ ಮೃತಪಟ್ಟಾಗ ಸರ್ವೆ ನಂ.64 ಮತ್ತು 151 ಹಾಗೂ ಇನಾಮ ಜಮೀನುಗಳಾದ ಸರ್ವೆ ನಂ. 67, 69 ಮತ್ತು 70 ನನ್ನ ತಾತನ ಹೆಸರಿನಲ್ಲಿ ಇದ್ದವು ಎಂದರೆ ಸರಿಯಲ್ಲ ಬದಲಾಗಿ ನನ್ನ ತಂದೆಯ ಹೆಸರಿನಲ್ಲಿ ಇದ್ದವು. ಇನಾಮ ಜಮೀನುಗಳ ಗ್ರಾಂಟ ಆದೇಶ ನನ್ನ ತಂದೆಯ ಹೆಸರಿಗೆ ಆಗಿತ್ತು ಎಂದರೆ ಸರಿಯಲ್ಲ. ಬದಲಾಗಿ ನನ್ನ ತಾತನ ಹೆಸರಿನಲ್ಲಿ ಅಗಿತ್ತು ಎಂದು ಹೇಳುತ್ತಾರೆ. ನನ್ನ ತಾತನ ಹೆಸರಿನಲ್ಲಿ ಆಗಿರುವ ಗ್ರಾಂಟ ಆದೇಶದ ದಾಖಲೆಗಳನ್ನು ಹಾಜರಪಡಿಸಿಲ್ಲ. ನನ್ನ ತಾತನ ಹೆಸರಿನಲ್ಲಿ ಆಗಿರುವ ಗ್ರಾಂಟ ಆದೇಶದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾತನಿಗೆ ರಾಮಪ್ಪ, ಮಲ್ಲಪ್ಪ ಮತ್ತು ಭೀಮಪ್ಪ ಮೂರು ಜನ ಮಕ್ಕಳು. ಬಸಪ್ಪ ಗುರುಪಾದಪ್ಪ ಹೊಳೆಪ್ಪನವರ ನನ್ನ ಚಿಕ್ಕ ಅಜ್ಜ ಇದ್ದು ಅವರು ಬೇರೆ ಕುಟುಂಬಕ್ಕೆ ದತ್ತಕ್ಕ ಆಗಿದ್ದರು.

6. 1966 ರಲ್ಲಿ ನನ್ನ ತಂದೆ ಮತ್ತು ಅವರ ಇಬ್ಬರು ಅಣ್ಣ ತಮ್ಮಂದಿರು ಹಾಗೂ ಬಸಪ್ಪರವರು ಸರ್ವೆ ನಂ.70 ಮತ್ತು 71 ನ್ನು ವಾಟ್ನಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ವಾಟ್ನಿಯಲ್ಲಿ ಅರ್ಧಪಾಲು ಬಸಪ್ಪರವರಿಗೆ ಹೊಗಿತ್ತು ಎಂದರೆ ಸರಿಯಲ್ಲ. 1972 ರಲ್ಲಿ ಆಗಿರುವ ವಾಟ್ನಿಯಲ್ಲಿ ಸರ್ವೆ ನಂ.151 ರಲ್ಲಿ 4 ಎಕರೆ, ಸರ್ವೆ ನಂ.67 ರಲ್ಲಿ ಪಶ್ಚಿಮ ಭಾಗದ 5 ಎಕರೆ, ಸರ್ವೆ ನಂ.69 ರಲ್ಲಿ 5 ಎಕರೆ 11 ಗುಂಟೆ, ಸರ್ವೆ ನಂ.70 ರಲ್ಲಿ 7 ಎಕರೆ, ಸರ್ವೆ ನಂ.127 ರಲ್ಲಿ 4 ಎಕರೆ 24 ಗುಂಟೆ ಜಮೀನುಗಳು ನನ್ನ ತಂದೆ ರಾಮಪ್ಪನಿಗೆ ಪಾಲಿಗೆ ಬಂದಿದ್ದವು ಎಂದರೆ ಸರಿಯಲ್ಲ.

7. 1974 ರಲ್ಲಿ ನನ್ನ ತಂದೆ 1 ನೇ ಪ್ರತಿವಾದಿಗೆ ಸರ್ವೆ ನಂ.151, 127 ಮತ್ತು 70 ರಲ್ಲಿ ಜಮೀನುಗಳನ್ನು ಕೊಟ್ಟು ಮನೆಯಿಂದ ಹೊರ ಹಾಕಿದರು ಎಂದರೆ ಸರಿಯಲ್ಲ. 1974 ರಿಂದ 1 ನೇ ಪ್ರತಿವಾದಿ ಬೇರೆ ಇದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.57 ರಲ್ಲಿ 7 ಎಕರೆ 23 ಗುಂಟೆಯ ಎರಡು ಪ್ರತ್ಯೇಕ ಪಟ್ಟಿಗಳನ್ನು 1 ನೇ ಪ್ರತಿವಾದಿ ತನ್ನ ಸ್ವಂತ ಗಳಿಕೆಯಿಂದ ಖರೀದಿಸಿದರು ಎಂದರೆ ಸರಿಯಲ್ಲ. ನಾನು 1977 ರಲ್ಲಿ ಜನಿಸಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳನ್ನು ಮರೆಮಾಚಿ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಮಕ್ಕಳಿಗೆ ಅವರವರ ಪಾಲುಗಳನ್ನು ಹಂಚಿಕೆ ಮಾಡಿಕೊಟ್ಟಿರುವುದರಿಂದ ನನಗೆ ಮತ್ತು ದಾವಾ ಸ್ವತ್ತುಗಳಿಗೆ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ದಿಃ 15-02-2000 ರಂದು ಸರ್ವೆ ನಂ.58 ರಲ್ಲಿ 5 ಎಕರೆ 24 ಗುಂಟೆ 1 ನೇ ಪ್ರತಿವಾದಿ ತನ್ನ ಸ್ವಂತ ಗಳಿಕೆಯಿಂದ ಖರೀದಿಸಿದರು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಂ.10 ರಿಂದ 13 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ಸುಳ್ಳು ಪ್ರಮಾಣ ಪತ್ರಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಜಮಖಂಡಿ